ಹೇಗೆ ಕಲಿಯಬೇಕು ಅಲ್ಲವೇ?' ಎಂದು ಪ್ರಶ್ನಿಸಿದರು.

ಗುರುಗಳ ಪ್ರಶ್ನೆಗೆ ಶಿಷ್ಯ ಬಳಗದಿಂದ ಸಮರ್ಪಕ ಉತ್ತರ ನೀಡಲು ಸಾಧ್ಯವಾಗಲಿಲ್ಲ. ಎಳೆಬಿಸಿಲು ಚುರುಕಾಗತೊಡಗಿತ್ತು. ಎಲ್ಲರೂ ಶಾಲೆಯ ಆವರಣದಿಂದ ಮನೆಯ ಕಡೆ ಹೆಜ್ಜೆ ಹಾಕತೊಡಗಿದರು. 'ನೋಡಿ ನೀವೆಲ್ಲಾ ಕಲಿತ ಈ ಶಾಲೆ ಈಗ ಜೀರ್ಣಾವಸ್ಥೆ ತಲುಪಿದೆ. ನಿಮಗೆ ವಿದ್ಯೆ ನೀಡಿದ ಈ ವಿದ್ಯಾಮಂದಿರವನ್ನು ಸಾಧ್ಯವಾದರೆ ಜೀರ್ಣೋದ್ಧಾರ ಮಾಡಿ' ಎಂದು ಬಸವನಗೌಡರು ತಮ್ಮ ವಿದ್ಯಾರ್ಥಿಗಳಿಗೆ ಹೇಳಿದರು. ಆಗ ಮಲ್ಲಪ್ಪ 'ಸಾರ್ ಈಗ ನಮ್ಮ ಬಳಿ ಅಷ್ಟು ಹಣವಿಲ್ಲ, ನಿಮ್ಮ ಹೆಸರಲ್ಲೊಂದು ಗುಡಿ ಕಟ್ಟಲು ಸಾಕಾಗುವಷ್ಟು ಮಾತ್ರ ಹಣ ನಮ್ಮ ಬಳಿಯಿರುವುದು. ಮೊದಲು ಗುಡಿ ಕಟ್ಟಿ ಮುಂದೆ ಯಾವಾಗಲಾದರೂ ಶಾಲೆಯ ಅಭಿವೃದ್ಧಿ ಮಾಡೋಣ' ಎಂದನು. ಬಸವನಗೌಡರು ತುಸು ಕೋಪಗೊಂಡು 'ಶಾಲೆಗಿಂತ ಪವಿತ್ರವಾದ ಗುಡಿ ಎಲ್ಲಿದೆ ಜಗತ್ತಿನಲ್ಲಿ? ಒಂದು ಗುಡಿ ಕಟ್ಟಿದರೆ ಒಂದು ಧರ್ಮದ ಜನರು ಮಾತ್ರ ಆ ಗುಡಿಗೆ ಬರುತ್ತಾರೆ.

ಶಾಲೆ ಕಟ್ಟಿದರೆ ಎಲ್ಲಾ ಧರ್ಮದ ಮಕ್ಕಳು ಕಲಿಯಲು ಬರುತ್ತಾರೆ. ಒಂದು ಗುಡಿ ಕಟ್ಟಿ ಒಬ್ಬ ಅರ್ಚಕ ಹಲವಾರು ಭಿಕ್ಷುಕರನ್ನು ಹುಟ್ಟು ಹಾಕುವ ಬದಲು ಒಂದು ಶಾಲೆಯನ್ನು ಕಟ್ಟಿದರೆ ನೂರಾರು ಸಶಕ್ತ ಪ್ರಜೆಗಳನ್ನು ಸಮಾಜಕ್ಕೆ ನೀಡಬಹುದು' ಎಂದರು. ಗುರುಗಳ ಮಾತುಕೇಳಿ ಶಿಷ್ಯಬಳಗದಲ್ಲಿ ಗೊಂದಲವೇರ್ಪಟ್ಟಿತು. ಇದನ್ನು ಮನಗಂಡ ಬಸವನಗೌಡರು, ನೋಡಿ ಮಕ್ಕಳು ದೇವರ ಸಮಾನ. ಶಾಲೆಯೆಂಬುದು ದೈವಸ್ಥಳ. ಅದು ಸರ್ವಜನಾಂಗದ ಶಾಂತಿಯ ತೋಟ. ನಿತ್ಯ ಅನ್ನ ದಾಸೋಹ, ವಿದ್ಯಾ ದಾಸೋಹ ನೀಡುವ ಶಾಲೆಯು ಎಂದಿಗೂ ದೇವರು ನೆಲೆಸುವ ಪುಣ್ಯಕ್ಷೇತ್ರವಲ್ಲವೆ? ಅದೂ ಅಲ್ಲದೇ ಈಗಾಗಲೇ ದೇವರಿಗೇ ಬೇಸರ ತರಿಸುವಷ್ಟು ಗುಡಿಗಳು ನಮ್ಮ ಊರಿನಲ್ಲಿವೆ. ನೀವು ಕಟ್ಟುವುದಾದರೆ ಈ ಶಾಲೆಯನ್ನು ಕಟ್ಟಿ' ಎಂದರು. ಶಿಷ್ಯಂದಿರ ಅಜ್ಞಾನದ ಪೊರೆ ನಿಧಾನವಾಗಿ ಹರಿಯಿತು. ಅವರೆಲ್ಲಾ ನಾಚಿಕೆಯಿಂದ ತಲೆತಗ್ಗಿಸಿದರು ಮತ್ತು ಗುರುಗಳ ಆಸೆಯಂತೆ ಶಾಲೆಯನ್ನು ಅಭಿವೃದ್ಧಿ ಪಡಿಸಲು ಹಣ ವಿನಿಯೋಗಿಸುವುದಾಗಿ ಮಾತನಿತ್ತರು. ಬಸವನಗೌಡರು ಶಿಷ್ಯಂದಿರ ಮೈದಡವುತ್ತಾ ಮನೆಯ ಕಡೆ ಹೆಜ್ಜೆಯಾದರು. ■

# ಹಕ್ಕಿಗೊಂದು ಗಿಡವ ಬಿಡಿ

■ ಭಾಸ್ಕರ ಕೆ. ಕುಂಟಪದವು

ಚಿತ್ರ: ಸಂತೋಷ್ ಸಸಿಹಿತ್ಲು



ಹಕ್ಕಿಗೊಂದು ಗಿಡವ ಬಿಡಿ
ಗೂಡು ಕಟ್ಟಲಿ
ಚಿಂವ್ ಚಿಂವ್ ಕೂಗಲದು
ಹಗಲು ಹುಟ್ಟಲಿ

ಮತ್ತೆ ಗಿಡದ ತಂಪು ಗಾಳಿ
ಮುಗಿಲ ಮುಟ್ಟಲಿ
ಕರಗಿ ಸುರಿದ ನೀರಹನಿಯು
ನೆಲವ ತಟ್ಟಲಿ

ನೀರು ಗಾಳಿ ಬೆಳಕ ಪಡೆದು
ಹೂವು ಅರಳಲಿ
ಅರಳಿ ನಿಂತ ಹೂವಿನಿಂದ
ಬೀಜ ಹೊರಳಲಿ

ನವ ಜೀವಕೆ ನೀರು ಬೆಳಕ
ನೀಡಲಂಬರ
ಹಕ್ಕಿ ಹಿಕ್ಕೆ ಹಸಿ ನೆಲಕ್ಕೆ
ಉಚಿತ ಗೊಬ್ಬರ

ಬೀಜ ಬಿದ್ದು ಮೊಳಕೆಯೊಡೆದು
ಹಸಿರನುಳಿಸಲಿ
ಜಗದ ಸಕಲ ಜೀವ ಕುಲದ
ಉಸಿರನುಳಿಸಲಿ

ಹಕ್ಕಿಗೊಂದು ಗಿಡವ ಬಿಡಿ
ಗೂಡು ಕಟ್ಟಲಿ
ಬರುವ ನಾಳೆ ನಲಿವು ಜನರ
ಬಾಳ ತಟ್ಟಲಿ... ■

## ಕುಂಚ ಪ್ರಪಂಚ



**ಮಹತಿ ಎಂ.**
ಯುಕೆಜಿ, ಕೆಎಲ್ಇ
ಬ್ಯಾನ್ಯನ್, ಬೆಂಗಳೂರು








**ಸುಮುಖ ಚೇತನ್**
5ನೇ ತರಗತಿ
ಶ್ರೀ ಕುಮಾರನ್ ಚಿಲ್ಡ್ರನ್ಸ್ ಹೋಮ್,
ಬೆಂಗಳೂರು

'ಸುಧಾ' ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಅವರೇ ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in